**ಗೌ. ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಮಧುಗಿರಿ**

**ಓ.ಎಸ್.ಸಂ.180/2021**

**ಪಿ.ಡಬ್ಲ್ಯೂ- 1**

**ದಿಃ 01-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮಧ್ಯಂತರ ಅರ್ಜಿ ಸಂಖ್ಯೆ 10 ಮತ್ತು 11 ರ ಆದೇಶದ ರಿ ತ್ಯಾ ಪಿ.ಡಬ್ಲ್ಯೂ- 1 ರವರ ಮುಂದುವರಿದ ಪಾಟೀ ಸವಾಲು ಶ್ರೀ.ಬಿ.ಕೆ.ಪಿ.ಎಸ್ ವಕೀಲರಿಂದಃ**

ಈ ದಾವೆಗೆ ಸಂಬಂಧಿಸಿದಂತೆ, ನಿಪಿ.14 ರಲ್ಲಿ 12 ಆಸ್ತಿಗಳು ನಮೂದು ಮಾಡಿದ್ದಾರೆ ಎಂದರೆ ಸರಿ. ನಿಪಿ.14 ರಲ್ಲಿ ನಮೂದು ಮಾಡಿದ 12 ಆಸ್ತಿಗಳ ಒಟ್ಟು ವಿಸ್ತೀರ್ಣ 22 ಎಕರೆಗಿಂತ ಜಾಸ್ತಿ ಇದೆ ಎಂದರೆ ಸರಿ. ನಿಪಿ.14 ಪ್ರಕಾರ 1 ನೇ ಪ್ರತಿವಾದಿಯ ಗಂಡ ಕೆ.ಜಿ.ಬಿ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದು ಎಂದರೆ ಇರಬಹುದು. 1 ನೇ ಪ್ರತಿವಾದಿಯ ಗಂಡ 2 ಲಕ್ಷ ಮಾತ್ರ ಸಾಲ ಪಡೆದಿದ್ದು ಎಂದರೆ ಇರಬಹುದು. 1 ನೇ ಪ್ರತಿವಾದಿಯ ಗಂಡ ದಿ.08-09-2005 ರಲ್ಲಿ ಸಾಲ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ ಆದರೆ ಸಾಲ ತಿರಿಸುವ ಸಲುವಾಗಿ ಮತ್ತು ಚಿಕಿತ್ಸೆಗಾಗಿ ಹಣ ಬೇಕು ಎಂದು ನನಗೆ ಹೇಳಿದ್ದರು. ನಾಗಣ್ಣನವರು ತೀರಿ ಹೋದ ನಂತರ ಪ್ರತಿವಾದಿಗಳು ಅವರಿಗೆ ಸೇರಿದ ಎಲ್ಲಾ ಆಸ್ತಿಗಳಲ್ಲಿ ಸ್ವಾಧೀನಾನುಭವದಲಿದ್ದರು ಎಂದರೆ ಸರಿ. ನಾಗಣ್ಣನವರಿಗೆ ಬೆಂಗಳೂರಿನಲ್ಲಿ ಮನೆಗಳು ಇವೆ ಎಂದರೆ ಸರಿ. ಸದರಿ ಮನೆಗಳಿಂದ ತುಂಬಾ ಬಾಡಿಗೆಗೆ ಹಣ ಬರುತ್ತದೆ ಎಂದರೆ ಸರಿಯಲ್ಲ. ಸ್ವತಃ ಮುಂದುವರೆದು ಹೇಳುತ್ತಾರೆ, ಅವರ ತಂದೆ ಕಾಲದಲ್ಲಿ ಬಾಡಿಗೆ ಹಣ ಬರುತಿತ್ತು ಆದರೆ ಆ ನಂತರ ಈಗ ನಾಗಣ್ಣ ತುಂಬಾ ಕಷ್ಟದಲ್ಲಿದ್ದರು. ಈಗಲೂ ಸಹ ಬಾಡಿಗೆ ಹಣ ಬರುತಿದ್ದು ಆ ವಿಚಾರ ನನಗೆ ಗೊತಿದ್ದರೂ ಸಹ ಬಾಡಿಗೆ ಹಣ ಬರುತಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನು ಮತ್ತು ಇತರ ಜಮೀನುಗಳಿಂದಲೂ ಸಹ ನಾಗಣ್ಣನವರಿಗೆ ತುಂಬಾ ಆದಾಯ ಬರುತಿತ್ತು ಎಂದರೆ ಸರಿಯಲ್ಲ. ನಾಗಣ್ಣ ತೀರಿ ಹೋದ ನಂತರ ಪ್ರತಿವಾದಿಗಳಿಗೆ ದಾವ ಆಸ್ತಿ ಮತ್ತು ಇತರ ಆಸ್ತಿಗಳಿಂದ ತುಂಬಾ ವರಮಾನ ಇರುವ ಕಾರಣ ದಾವ ಆಸ್ತಿ ನನಗೆ ಮಾರಾಟ ಮಾಡವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರು ಪಡಿಸಿರುವ ದಾಖಲೆಗಳ ಪ್ರಕಾರ ದಿ.12.07.2021 ರಂದು ಸಾಲ

ಖುಲಾಸೆಯಾಗಿದೆ ಎಂದರೆ ಸರಿ. ಸ್ವತಃ ಮುಂದುವರೆದು ಹೇಳುತ್ತಾರೆ, ಹಣವನ್ನು ಸಾಲಕ್ಕೆ ಕಟ್ಟದೇ ಇರುವ ಕಾರಣ ನಾನು ಬಲವಂತವಾಗಿ ಹಣ ಕಟ್ಟಿಸಿ ಸಾಲ ಖುಲಾಸೆ ಮಾಡಿಸಿದ್ದೇವೆ. ಪ್ರತಿವಾದಿಗಳು ಅವರ ಸ್ವಂತ ಹಣವನ್ನು ಕಟ್ಟಿ ಸಾಲ ತಿರುವಳಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಪಿ.14 ರಿಂದ 18 ದಾಖಲೆಗಳು ಈ ಕೇಸಿಗೆ ಸಂಬಂಧಿಸಿದಿಲ್ಲ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದಪ ಕರಾರು ಪತ್ರವನ್ನು ಸೃಷ್ಟಿಮಾಡಿಕೊಂಡು ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಸೃಷ್ಟಿತ ಕರಾರಿನ ಅಡಿಯಲ್ಲಿ ಹಣ ಪಡೆದಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿಯ 3 ಲಕ್ಷ ಕೈ ಸಾಲ ನನ್ನಿಂದ ಪಡೆದಿದ್ದು ಅದಕ್ಕೆ ಮಾತ್ರ ನಾನು ಮತ್ತು 4 ನೇ ಪ್ರತಿವಾದಿ ಭಾದ್ಯಸ್ಥರಾಗಿದ್ದು 3 ಲಕ್ಷ ಹಣವನ್ನು 4 ನೇ ಪ್ರತಿವಾದಿಯಿಂದ ಪಡೆಯಲು ಅರ್ಹ ಎಂದರೆ ಸರಿಯಲ್ಲ. ಉಳಿದ ಪ್ರತಿವಾದಿಗಳು ನನ್ನಿಂದ ಹಣ ಪಡೆದುಕೊಂಡಿಲ್ಲ ಮತ್ತು ಕರಾರು ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸುಳ್ಳು ಕರಾರು ಪತ್ರವನ್ನು ಸೃಷ್ಟಿಸಿ, ಅದಕ್ಕೆ ಪೂರಕವಾಗಿ ದಾವೆ ಹೂಡಿ ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ-** **ಈ ಹಂತದಲ್ಲಿ ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ, ಸಮಯ ನೀಡಿದೆ.**

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸರಿ ಇದೆ

ಸಹಿ/-

ಅಧಿಕ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮಧುಗಿರಿ.